**ದಿನಾಂಕ 03.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ– ಶ್ರೀ ಎಸ್.ಆರ್. ವಾದಿಯ ಪರ ವಕೀಲರಿಂದಃ–**

ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳು ನಿಜ ಇರುತ್ತವೆ. ಅವು ನನ್ನ ಮಾಹಿತಿ ಪ್ರಕಾರ ಇರುತ್ತವೆ. ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ.

ಪ್ರತಿವಾದಿಯು ನನಗೆ ನೀಡಿರುವ ವಾಗ್ದಾನ ಪತ್ರ ಮತ್ತು ಹಣಸಂದ ರಶೀದಿ, ನೋಟಿಸ್‌ನ ಕಚೇರಿ ಪ್ರತಿ, ಅಂಚೆ ರಶೀದಿ ಮತ್ತು ಅಂಚೆ ಟ್ರಾಕ್ ರೆಕಾರ್ಡ್‌ನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.1 ರಿಂದ 4 ಎಂದು ಗುರುತಿಸಲಾಯಿತು.

ನಿಪಿ.1 ರಲ್ಲಿರುವ ಪ್ರತಿವಾದಿಯ ಮೂರು ಸಹಿಗಳನ್ನು, ಸಾಕ್ಷಿದಾರರಾದ ಲೋಕೇಶ್ ಮತ್ತು ಪ್ರಕಾಶ್‌ರವರ ತಲಾ ಎರಡು ಸಹಿಗಳನ್ನು ಹಾಗೂ ಪತ್ರ ಬರಹಗಾರರಾದ ಎಸ್. ಸಿದ್ದೇಗೌಡ ರವರ ತಲಾ ಎರಡು ಸಹಿಗಳನ್ನು ಕ್ರಮವಾಗಿ ನಿಪಿ.1(ಎ) ಯಿಂದ ನಿಪಿ.1(ಡಿ) ಎಂದು ಗುರುತಿಸಲಾಯಿತು.

**ಈ ಮೂಲಕ ನನ್ನ ಸಾಕ್ಷ್ಯವನ್ನು ಅಂತ್ಯಗೊಳಿಸಿದ್ದು, ದಾವಾವನ್ನು ಡಿಕ್ರಿಗೊಳಿಸಲು ಪ್ರಾರ್ಥನೆ.**

**ಪ್ರತಿವಾದಿಯರು ಏಕಪಕ್ಷೀಯರಾಗಿರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ತಿ. ನರಸೀಪುರ